ಶ್ರೀ ಪಿ.ಜಿ.ಆರ್.ಸಿಂಧ್ಯ : ಆಗಲಿ.

ಕಾವೇರಿ ವಿವಾದದ ಬಗ್ಗೆ ಮುಖ್ಯ ಮಂತ್ರಿಗಳಿಂದ ಹೇಳಿಕೆ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಉಪನಾಯಕರಾದ ಸಿಂಧ್ಯಾರವರು ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಬೈರೇಗೌಡರು ಮಾನ್ಯ ಯಡಿಯೂರಪ್ಪನವರು ಬಾಬಾಗೌಡ ಪಾಟೀಲರು ಮತ್ತು ಮಾನ್ಯ ಪ್ರೊಫೆಸರ್ ನಂಜುಂಡಸ್ವಾಮಿಯವರು ಕಾವೇರಿ ಜಲವಿವಾದ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ನೀವು ಪತ್ರಿಕೆಗಳಲ್ಲಿ ವಿಚಾರವನ್ನು ಕೂಡ ಓದಿದ್ದೇವೆ. ಅದು ಸರಿಯಾಗಿ ಬರುತ್ತಿದೆ. ಇದರ ಬಗ್ಗೆ ವಿವರವಾದ ಹೇಳಿಕೆ ಕೊಡತಕ್ಕಂಥ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಸುಪ್ರೀಂ ಕೋರ್ಟಿನಲ್ಲಿ ಈ ಬಗ್ಗೆ ವಿಚಾರಣೆ ನಡೆಯುತ್ತಿದೆ. ವಾದ ನಮ್ಮ ಸರ್ಕಾರದ ಪರವಾಗಿದೆ. ಬಹಳ ಸಮರ್ಥನೀಯವಾಗಿ ವಾದವನ್ನು ಮಂಡನೆ ಮಾಡಿದ್ದಾರೆ. ತಮಿಳುನಾಡಿನ ಪರವಾಗಿ ವಾದವನ್ನು ಅವರು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಯಾವ ರೀತಿಯಾಗಿ ಸುಪ್ರೀಂ ಕೋರ್ಟ್ ಕಾನ್‌ಸ್ಟಿಟ್ಯೂಷನ್ ಬೇಂಚ್ ಏನಿದೆ ಅಲ್ಲಿ ಈ ವಿಚಾರವನ್ನು ಸೂಕ್ತವಾಗಿ ಪ್ರಸ್ತಾಪ ಮಾಡಿದ್ದಾರೆ ಎನ್ನತಕ್ಕಂಥಾದ್ದು ಮುಖ್ಯರಾಗಿರತಕ್ಕಂಥಾದ್ದು ಬಹುಶಃ ಈ ದಿವಸ ವಿರೋದ ಪಕ್ಷದ ನಾಯಕರಾದಿಯಾಗಿ ಎರಡೂ ಸದನದ ನಾಯಕರುಗಳು ಸಭೆಯನ್ನು ಸರ್ಕಾರದವರು ಕರೆದಿದ್ದೆವು.

ಅದರ ಉದ್ದೇಶ ಏನು ಬೆಳವಣಿಗೆಗಳು ಹಂತ ಹಂತವಾಗಿ ಬರುತ್ತವೆ ಅದರ ಬಗ್ಗೆ ತಮ್ಮ ಗಮನಕ್ಕೂ ಕೂಡ ತರಬೇಕು ಮತ್ತು ತಮ್ಮ ಸಲಹೆ ಪಡೆದು ಮುಂದಕ್ಕೆ ಸರ್ಕಾರ ಹೋಗಬೇಕು ಎನ್ನತಕ್ಕಂಥ ವಿಚಾರದಲ್ಲಿ ಸಭೆ ಕರೆದಾಗ ಸರ್ಕಾರಕ್ಕೆ ತಮ್ಮ ಸಹಕಾರ ಎಂದಿನಂತೆ ಇಂದೂ ಕೂಡ ಕೊಡಲಿಕ್ಕೆ ಎರಡು ಸದನದ ವತಿಯಿಂದ ಒಮ್ಮತದ ಅಭಿಪ್ರಾಯ ಬಂದಿದೆ ವಿರೋಧಪಕ್ಷದ ಎರಡೂ ಸದನದ ನಾಯಕರುಗಳಿಗೆ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಮತ್ತೊಮ್ಮೆ ಸಲ್ಲಿಸುತ್ತೇನೆ. ನನಗೆ ಟೆಲೆಕ್ಸ್ ಮೆಸೇಜ್ ಏನು ಬಂತು ಆಗ ಪತ್ರಿಕಾ ಮಿತ್ರರು ನನ್ನನ್ನು ಕಂಡು ಇದಕ್ಕೆ ಯಾವ ರೀತಿಯಲ್ಲಿ ತಾವು ತಮ್ಮ ರೀ ಆಕ್ಷನ್ ಇದೆ ಎಂದು ಕೇಳಿದಾಗ ರೀ ಆಕ್ಷನ್ ಸರ್ಕಾರದ ಪರವಾಗಿಯೇ ಇದೆ ಎಂದು ಹೇಳಿದ್ದೇನೆ. ಇದು ಉಭಯ ರಾಜ್ಯ ಸರ್ಕಾರಗಳ ನಮ್ಮ ರಾಜ್ಯ ಮತ್ತು ತಮಿಳುನಾಡಿನ ಒಳ್ಳೆಯ ಬಾಂಧವ್ಯವನ್ನು ನಾನು ಇಟ್ಟುಕೊಳ್ಳತಕ್ಕ ದೃಷ್ಟಿಯಿಂದ ಈ ಸಮಸ್ಯೆ ಬಗೆಹರಿಸತಕ್ಕಂಥ ದೃಷ್ಟಿಯಿಂದ ಕೊನೆಯ ಪಕ್ಷ temporary order of the Tribnal Constituted as per 1956 Act.

ಏನು ಇದೆ ಅದಕ್ಕೆ ಸಂಬಂಧಪಟ್ಟಂತೆ ಒಳ್ಳೆಯ ಸಲಹೆಯನ್ನು ಸುಪ್ರೀಂ ಕೋರ್ಟ್ ಕೊಟ್ಟಿದೆ. ಇದಕ್ಕೆ ಸ್ವಾಗತವನ್ನು ಕೂಡ ನಾನು ಮಾಡಿದ್ದೇನೆ. ಈ ವಿಚಾರವನ್ನು ತಮಿಳು ನಾಡು ಮುಖ್ಯಮಂತ್ರಿಗಳು ಸುಪ್ರೀಂ ಕೋರ್ಟ್ ಸಲಹೆಯನ್ನು ಪ್ರಸ್ತಾಪ ಮಾಡಿ ಅದು ಒಪ್ಪಿಗೆಯಾಗಿಲ್ಲ ಎನ್ನುವ ಮಾತನ್ನು ಅವರು ಹೇಳಿರತಕ್ಕಂಥಾದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಶ್ರೀ Parashran ಅವರ ಸರ್ಕಾರದ ಪರವಾಗಿ ವಾದ ಮಾಡತಕ್ಕಂಥಾವರು ಇದು ನನಗೆ ಒಪ್ಪಿಗೆಯಾಗಿಲ್ಲ ಎನ್ನವಂತಹ ಮಾತನ್ನು ಹೇಳಿದಾಗ ಬಹುಶಃ ಈ ಒಂದು ವಿಷಯವನ್ನು ಕಾನ್‌ಸ್ಟಿಟ್ಯೂಶನ್ ಬೇಂಚ್ ವತಿಯಿಂದ ಹೇಳತಕ್ಕಂಥ ಮಾನ್ಯ ನ್ಯಾಯಾಧೀಶರು ಆಲೋಚನೆ ಮಾಡಿ ಮತ್ತೊಮ್ಮೆ ವಿಚಾರ ಮಾಡುವುದು ಒಳ್ಳೆಯದು ಎನ್ನತಕ್ಕಂಥ ಸಲಹೆ ಮತ್ತೊಮ್ಮೆ ಅವರಿಗೆ ಕೊಟ್ಟಿದ್ದಾರೆ ಕೊಟ್ಟ ಮೇಲೆ ತಮಿಳುನಾಡು ಸರ್ಕಾರವನ್ನು ಕೇಳಿ ಮತ್ತೆ ಹೇಳುತ್ತೇವೆನ್ನುವ ಮಾತನ್ನು

ಈ ವಿಚಾರದ ಬಗ್ಗೆ ವಾದ ಇನ್ನೂ ಮುಂದುವರಿದಿದ್ದು ಈ ವಿಚಾರ ಮತ್ತೆ ಸುಪ್ರೀಂ ಕೋರ್ಟಿನ ಮುಂದೆ Tuesday ಬರುತ್ತದೆ ಬಂದಾಗ ನಮ್ಮ ಸರ್ಕಾರ ಅವರು ಏನು ಹೇಳುತ್ತಾರೋ ಕಾದು ನೋಡೋಣ. ತಮಿಳುನಾಡು ಸರ್ಕಾರ ಪಾಂಡಿಚೇರಿ ಸರ್ಕಾರ ಅವರ ಪರವಾಗಿ ಏನು ಹೇಳುತ್ತಾರೋ ಕಾದು ನೋಡೋಣ. ಅವರು ಏನು ಹೇಳುತ್ತಾರೋ ಅದರ ಮೇಲೆ ನಾವು ನಿಂತಿದ್ದೇವೆ. ಈ ಮಧ್ಯೆ ನಾವು ಸಿದ್ದತೆಗಳನ್ನು ಮಾಡಿಕೊಳ್ಳಬೇಕು. ನಮ್ಮ temporary order of the tribunal.

ಇದ ಬಗ್ಗೆ ಯಾವ ರೀತಿ ಮಾಡಬೇಕೆನ್ನುವ ವಿಚಾರ ಇಟ್ಟು ಮುಂದಕ್ಕೆ ಹೋಗಬೇಕು ಎನ್ನತಕ್ಕಂಥ ವಿಚಾರದ ಬಗ್ಗೆ It is purely a technical matter 205 ಟಿ.ಎಂ.ಸಿ. ನೀರು ಏನು ಇದೆ ಇದರ ಬಗ್ಗೆ ಯಾವ ರೀತಿ Calender ಹಾಕಿ ಟೆಂಪರರಿ ಆರ್ಡರ್ ಕೊಟ್ಟಿದ್ದಾರೆ ಅದರ ಬಗ್ಗೆ ಅದನ್ನು ನಡೆಸಿ ಕೊಡುವುದಕ್ಕೆ ಯಾವ ರಾಜ್ಯ ಸರ್ಕರವೂ ಆಗುವುದಿಲ್ಲ ಸಾಧ್ಯವಿಲ್ಲ ಆ ತರಹ ರೀತಿಯಲ್ಲಿ ಮಾಡಿದ್ದಾರೆ ಎಂದು ನಾವು ಸುಪ್ರೀಂ ಕೋರ್ಟಿನ ಮುಂದೆ ಸಮರ್ಥನೀಯವಾಗಿ ವಾದ ಮಾಡಿದ್ದೇವೆ.

ಈ ಮಧ್ಯೆ ನಾವು ಯಾವ ರೀತಿ ಹೇಳಬೇಕು? ಏನು ಮಾಡಬೇಕು? ಅನ್ನುತಕ್ಕಂಥಾದ್ದನ್ನು These are all technical aspects.

ಈ ವಿಚಾರವನ್ನು ನಾವು ಅಲ್ಲಿಡುತ್ತೇವೆ. ನಾವು ವಿರೋಧ ಪಕ್ಷದ ನಾಯಕರ ಸಭೆಯಲ್ಲಿಯೂ ಕೂಡ ಸೂಕ್ಷ್ಮವಾಗಿ ಈ ವಿಚಾರ ಎತ್ತಿದ್ದೇವೆ. ವಕೀಲರು ಶ್ರೀಮಾನ್ ನಾರೀಮನ್‌ರವರಿದ್ದಾರೆ ಮತ್ತು Mr. Nariman is assisted by other advocates ಅವರು ಮತ್ತು ಟೆಕ್ನಿಕಲ್ ವಿಂಗ್ ಏನಿದೆ? ಆ ವಿಚಾರವನ್ನು ಅವರಿಗೇ ಬಿಟ್ಟಿದ್ದೇವೆ. ಆ ವಿಚಾರವನ್ನು ತಮ್ಮ ಮುಂದೆ ಇಟ್ಟು ನಾವು ಮುಂದೆ ಹೋಗುತ್ತೇವೆ. ತಮ್ಮನ್ನೂ ಕೂಡ ಆಗಾಗ್ಗೆ ನಂಬಿಕೆಗೆ ತೆಗೆದುಕೊಂಡೇ ಕಾನ್ಫಿಡೆನ್ಸ್‌ಗೆ ತೆಗೆದುಕೊಂಡೇ ಹೋಗತಕ್ಕಂಥ ವಿಚಾರದಲ್ಲಿ ಕೂಡ ನಾವು ಹಂತ ಹಂತವಾಗಿ ಹೋಗುತ್ತಿದ್ದೇವೆ. ಈ ಸಂದರ್ಭದಲ್ಲಿ ಒಂದೇ ಒಂದು ಮಾನ್ಯ ಸಭಾಧ್ಯಕ್ಷರೆ ತಮ್ಮ ಮುಖಾಂತರ ವಿರೋಧ ಪಕ್ಷದ ಉಪನಾಯಕರಿಗೆ ಮತ್ತು ಸದನದ ಗಮನಕ್ಕೆ ತರತಕ್ಕಂಥಾದ್ದು ಕರ್ನಾಟಕ ರಾಜ್ಯದ ಹಿತವನ್ನು ನಾವು ಗಮನದಲ್ಲಿ ಇಟ್ಟೇ ಮುಂದೆ ಹೋಗುತ್ತೇವೆ ಎನ್ನುತಕ್ಕಂಥ ಮಾತು. ಜೊತೆಗೆ ನೆರೆ ರಾಜ್ಯಗಳ ಜೊತೆಗೆ ಬಹಳ ಹೊಂದಾಣಿಕೆಯ ಸಂಬಂಧ ಕೂಡ ಇಟ್ಟು ಮುಂದೆ ಹೋಗಬೇಕಾಗುತ್ತದೆ. ನಾವು ಅದನ್ನು ಕೂಡಾ ಗಮನದಲ್ಲಿ ಇಟ್ಟೇ ಮುಂದೆ ಹೋಗುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಸುಪ್ರೀಂ ಕೋರ್ಟಿನಲ್ಲಿ ನ್ಯಾಯಾಧೀಶರು ಅವರು ಏತಕ್ಕೆ ಹೇಳಿದ್ದಾರೆ ಎನ್ನತಕ್ಕಂಥ ಅರ್ಥವನ್ನು ನಾವು ಮಾಡಿಕೊಳ್ಳಬೇಕು. ಮಾಡಿಕೊಂಡಿದ್ದೇವೆ. ಅದನ್ನು ಗಮನದಲ್ಲಿ ಇಟ್ಟು ಮಾತ್ರ ಮುಂದೆ ಹೋಗುತ್ತಿದ್ದೇವೆ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ವಿವರಗಳು ಅವರು ಯಾವ ರೀತಿ ಹೇಳುತ್ತಾರೆ ಅದನ್ನು ಇಲ್ಲಿ ಹೇಳುವುದು ಬೇಡ. ಹೆಚ್ಚಿನ ವಿವರಗಳ ಚರ್ಚೆಗೆ ನಾವು ಈ ಸಂದರ್ಭದಲ್ಲಿ ಹೋಗದೇ ಇಲ್ಲಿಗೇ ನಿಲ್ಲಿಸಿರುವುದು ಬಹಳ ಒಳ್ಳೆಯದೆಂದು ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ವಾಟಾಳ್‌ರವರು ಮತ್ತು ಉಳಿದಿರತಕ್ಕಂಥ ಸ್ನೇಹಿತರಿಗೆ ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.